# ಅಪ್ಪನ ಹೆದ್ದಾರಿಯಲ್ಲಿ ಮಗನ ಬೈಕ್ ರೇಸ್!

**ಅಂಬರೀಶ್ ನಟನೆಯ 'ಅಂಬಿ ನಿಂಗ್ ವಯಸ್ಸಾಯ್ತೋ' ತೆರೆ ಕಾಣುವ ಸಿದ್ಧತೆಯಲ್ಲಿದ್ದರೆ, ಅವರ ಪುತ್ರ ಅಭಿಷೇಕ್ ಗೌಡ ನಾಯಕನಾಗಿ ನಟಿಸುತ್ತಿರುವ ಚೊಚ್ಚಲ ಸಿನಿಮಾ 'ಅಮರ್' ಚಿತ್ರೀಕರಣಕ್ಕೆ ಸಿದ್ಧತೆ ನಡೆಯುತ್ತಿದೆ.**

ಅಂಬರೀಶ್ ಮುಖ್ಯ ಪಾತ್ರದಲ್ಲಿ ನಟಿಸಿರುವ 'ಅಂಬಿ ನಿಂಗ್ ವಯಸ್ಸಾಯ್ತೋ' ಚಿತ್ರದ ಚಿತ್ರೀಕರಣ ಮುಗಿದಿದೆ. ವಯಸ್ಸಾದ ಕಾರಣದಿಂದಲೋ ದಣಿವಿನಿಂದಲೋ ಅಥವಾ ಬೇಸರದಿಂದಲೋ ರಾಜಕಾರಣದಿಂದ ದೂರ ಉಳಿದಿರುವ ಅಂಬರೀಶ್, 'ಅಂಬಿ ನಿಂಗ್ ವಯಸ್ಸಾಯ್ತೋ' ಮೂಲಕ ಮತ್ತೆ ಗಾಂಧಿನಗರದಲ್ಲಿ ಸುದ್ದಿಯಲ್ಲಿದ್ದಾರೆ. ಇದರ ಜೊತೆಗೆ ಅವರ ಮಗನನ್ನು ಗಾಂಧಿನಗರಕ್ಕೆ ನಾಯಕನಾಗಿ ಪರಿಚಯಿಸುವ 'ಅಮರ್' ಚಿತ್ರದ ಶೂಟಿಂಗ್ ಕೂಡ ಶುರುವಾಗಿದೆ. ಅಪ್ಪ–ಮಗ ಒಮ್ಮೆಗೇ ಚಿತ್ರರಂಗದಲ್ಲಿ ಸಕ್ರಿಯವಾಗಿರುವುದು ಅಂಬಿ ಅಭಿಮಾನಿಗಳ ಪಾಲಿಗೆ ವಿಶೇಷ ಸಂದರ್ಭವೇ ಸರಿ.

ಬಹು ಸಮಯದ ನಂತರ ಮುಖ್ಯ ಪಾತ್ರದಲ್ಲಿ ನಟಿಸುತ್ತಿರುವ ಸಿನಿಮಾದ ಬಗ್ಗೆ ಅಂಬರೀಶ್ ಅವರಿಗೆ ಕುತೂಹಲವಿದೆ. ಚಿತ್ರಕಥೆ ಅವರಿಗೆ ಇಷ್ಟವಾಗಿದ್ದು, ಚಿತ್ರೀಕರಣದಲ್ಲಿ ಉತ್ಸಾಹದಿಂದ ಭಾಗವಹಿಸಿರುವುದು ಚಿತ್ರತಂಡಕ್ಕೆ ಖುಷಿ ಕೊಟ್ಟಿದೆ. ಗುರುದತ್ ಗಾಣಿಗ ಚಿತ್ರದ ನಿರ್ದೇಶಕರು. 'ಪವರ್ ಪಾಂಡಿ' ಎನ್ನುವ ತಮಿಳಿನ ಯಶಸ್ವೀ ಚಿತ್ರವನ್ನು ಗುರು ಕನ್ನಡಕ್ಕೆ ತರುತ್ತಿದ್ದಾರೆ.

ಅಂಬರೀಶ್ ಅವರೊಂದಿಗೆ ಸುದೀಪ್ ಕೂಡ ಚಿತ್ರದ ಮುಖ್ಯ ಪಾತ್ರವೊಂದರಲ್ಲಿ ನಟಿಸಿದ್ದಾರೆ. 'ವೀರ ಪರಂಪರೆ' ಚಿತ್ರದ ನಂತರ ಈ ಜೋಡಿ ಮತ್ತೆ ಒಟ್ಟಾಗಿ ಕಾಣಿಸಿಕೊಳ್ಳುತ್ತಿದೆ. ಚಿತ್ರದಲ್ಲಿ ಸುದೀಪ್ 'ಯಂಗ್ ಅಂಬಿ'ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. 'ಯಂಗ್ ಅಂಬಿ'ಯಾಗಿ ನಟಿಸಿರುವುದು ಅವರಿಗೆ ಖುಷಿ ಕೊಟ್ಟಿದೆ, ಸವಾಲೂ ಎನ್ನಿಸಿದೆ. ತಮ್ಮದೇ ಆದ ಸ್ಟೈಲ್‌ನಲ್ಲಿ ಅಂಬರೀಶ್ ಅವರನ್ನು ಅನುಕರಿಸಿರುವುದಾಗಿ ಸುದೀಪ್ ಹೇಳಿಕೊಂಡಿದ್ದಾರೆ. ಸುಹಾಸಿನಿ ಹಾಗೂ ಶ್ರುತಿ ಹರಿಹರನ್ ತಾರಾಗಣದಲ್ಲಿರುವ ಪ್ರಮುಖರು.

ಒಂದೆಡೆ ಅಪ್ಪನ ಚಿತ್ರ ತೆರೆ ಕಾಣುವ ಸಿದ್ಧತೆ ನಡೆಸುತ್ತಿದ್ದರೆ ಇನ್ನೊಂದೆಡೆ ಮಗನ ಚಿತ್ರದ ಶೂಟಿಂಗ್‌ಗೆ ಸಿದ್ಧತೆ ನಡೆದಿದೆ. ಅಂಬರೀಶ್‌ರ ಪುತ್ರ ಅಭಿಷೇಕ್ ಗೌಡ ನಾಯಕನಾಗಿ ನಟಿಸುತ್ತಿರುವ ಚೊಚ್ಚಲ ಚಿತ್ರಕ್ಕೆ 'ಅಮರ್' ಎಂದು ಹೆಸರಿಸಲಾಗಿದೆ. ನಾಗಶೇಖರ್ ಈ ಚಿತ್ರದ ನಿರ್ದೇಶಕರು. ತಮ್ಮ ನೂರನೇ ಚಿತ್ರದಲ್ಲಿ ಅಂಬರೀಶ್ 'ಅಮರ್' ಎನ್ನುವ ಪಾತ್ರದಲ್ಲಿ ನಟಿಸಿದ್ದರು. ಅದೇ ಹೆಸರನ್ನು ಮಗನ ಚಿತ್ರಕ್ಕೆ ಇಡಲಾಗಿದೆ.

ವಿವಿಧ ಭಾಷೆಗಳ ಖ್ಯಾತ ಕಲಾವಿದರನ್ನು 'ಅಮರ್' ಚಿತ್ರಕ್ಕೆ ಕರೆ ತರಲು ನಾಗಶೇಖರ್ ಪ್ರಯತ್ನಿಸುತ್ತಿದ್ದಾರೆ. ಈ ಮೂಲಕ ಅಭಿಷೇಕ್‌ರ ಚೊಚ್ಚಲ ಸಿನಿಮಾವನ್ನು ಸ್ಮರಣೀಯಗೊಳಿಸುವುದು ಅವರ ಉದ್ದೇಶ.

ತೊಂಬತ್ತರ ದಶಕದ ನೈಜಕಥೆಯೊಂದನ್ನು ನಾಗಶೇಖರ್ 'ಅಮರ್' ಚಿತ್ರಕ್ಕೆ ಆರಿಸಿಕೊಂಡಿದ್ದಾರೆ. ಕಥೆಯಲ್ಲಿ ನಾಯಕ ಹಾಗೂ ನಾಯಕಿ ಇಬ್ಬರೂ ಬೈಕ್ ರೈಡರ್‌ಗಳು. ಇವರಿಬ್ಬರ ಪ್ರೇಮದ ಆರೋಹಣದ ಸುಂದರ ಜರ್ನಿ ಚಿತ್ರದಲ್ಲಿ ಇರಲಿದೆಯಂತೆ. ಕರ್ನಾಟಕದ ಜೊತೆಗೆ ಸ್ಕಾಟ್ಲೆಂಡ್‌ನಲ್ಲಿ ಚಿತ್ರೀಕರಣ ನಡೆಸಲು ನಿರ್ದೇಶಕರು ಉದ್ದೇಶಿಸಿದ್ದಾರೆ. 'ಮಾಸ್ತಿಗುಡಿ'ಯ ಚಿತ್ರದ ಕಹಿಯನ್ನು ಅಂಬಿಪುತ್ರನ ಚಿತ್ರದ ಮೂಲಕ ಮರೆಯುವ ಪ್ರಯತ್ನದಲ್ಲಿ ನಿರ್ದೇಶಕರಿದ್ದಾರೆ.

ತಾನ್ಯ ಹೋಪ್ 'ಅಮರ್' ಚಿತ್ರದ ನಾಯಕಿ. ಅಭಿಷೇಕ್ ಹಾಗೂ ತಾನ್ಯ ಇಬ್ಬರೂ ಬೈಕ್ ರೇಸ್ ಕುರಿತಂತೆ ತರಬೇತಿ ಪಡೆದಿದ್ದಾರೆ. ಜೂನ್ ಕೊನೆಯ ಭಾಗದಿಂದ ಚಿತ್ರೀಕರಣ ಆರಂಭವಾಗಲಿದೆ.

■ ರಘು

